# ದಿನಾಂಕ : 04.09.2021 ರಂದು ಬೆಳಿಗ್ಗೆ 10:30 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ–80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 04.09.2021 ರಂದು ಬೆಳಿಗ್ಗೆ 10:30 ಗಂಟೆಗೆ ಮಾನ್ಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

<u>ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು</u>

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಲಿಂಗರಾಜೇಗೌಡ –ಸಹಾಯಕ ಅಭಿಯಂತರರು (ಸದಸ್ಯ ಕಾರ್ಯದರ್ಶಿ)
3. ಶ್ರೀ.ಕುಮಾರ್ – ಸದಸ್ಯರು
4. ಶ್ರೀ.ರಮೇಶ್ – ಸದಸ್ಯರು
5. ಶ್ರೀ.ವೆಂಕಟೇಶ್ – ಸದಸ್ಯರು
6. ಶ್ರೀ.ಆನಂದ್ – ಸದಸ್ಯರು
7. ಶ್ರೀ. ಗೌತಮ್ – ಸಹಾಯಕ ಅಭಿಯಂತರರು ಬೆಸ್ಕಾಂ
8. ಶ್ರೀಮತಿ.ಚಿತ್ರ – ಹಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀ.ರುದ್ರಮುನಿ – ಸಹಾಯಕ ಅಭಿಯಂತರರು ಬೆಸ್ಕಾಂ
10. ಶ್ರೀ.ರವಿಚಂದ್ರ – ಸಹಾಯಕ ಅಭಿಯಂತರರು (ಯು.ಎಫ್.ಡಬ್ಲ್ಯು) ಬಿ.ಡಬ್ಲ್ಯೂ.ಎಸ್.ಎಸ್.ಬಿ
11. ಶ್ರೀ.ದೇವರಾಜ್ – ಅರಣ್ಯ ಇಲಾಖೆ
12. ಶ್ರೀ. ಸತೀಶ್– ಮಾರ್ಷಲ್
13. ಶ್ರೀ. ಗೋವಿಂದೇ ಗೌಡ – ತೋಟಗಾರಿಕೆ ಇಲಾಖೆ
14. ಶ್ರೀ. ಮಹದೇವ್ – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ
15. ಶ್ರೀ. ಎಂ.ಭಂಜ ಪಟನ್. – ಕೆಲಸ ಪರಿವೀಕ್ಷಕ ಬಿ.ಡಬ್ಲ್ಯೂ.ಎಸ್.ಎಸ್. ಬಿ

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರೂ ಆದ ಶ್ರೀ.ಸಿ.ಲಿಂಗರಾಜೇ ಗೌಡರವರು ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಾಗೂ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಓದಿ ತಿಳಿಸಿದರು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಹಾಗೂ ವಾರ್ಡ್ ಸಮಿತಿಗೆ ಆಯ್ಕೆ ಮಾಡಲಾಗಿರುವ ಸದಸ್ಯರುಗಳ ಪಟ್ಟಿಯನ್ನು ಸಭೆಗೆ ತಿಳಿಸಿದರು.

- ಶ್ರೀ.ಆರ್.ಪಿ.ಶೆಟ್ಟಿ ಸಾರ್ವಜನಿಕರು ರವರು ಮಾತನಾಡುತ್ತಾ, 17ನೇ ಎಫ್ ಮುಖ್ಯ ರಸ್ತೆಯಲ್ಲಿ ಕಲ್ವರ್ಟ್ ಹತ್ತಿರ ಹೂಳು ತುಂಬಿಕೊಂಡು ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಂತು ವಾಹನಗಳು ಮತ್ತು ಸಾರ್ವಜನಿಕರ ಓಡಾಟಕ್ಕೆ ತುಂಬಾತೊಂದರೆಯಾಗುತ್ತಿದೆ ಎಂದು ದೂರನ್ನು ತಿಳಿಸುತ್ತಾ, ಹಾಗೂ ಸದರಿ ರಸ್ತೆಯ ಎರಡು ಬದಿಯಲ್ಲಿ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ಸಂಬಂಧ ಹೂಳನ್ನು ತೆರವುಗೊಳಿಸಲು ಸಹಾಯಕ ಅಭಿಯಂತರರು ಕ್ರಮ ವಹಿಸಿ ಮುಂದಿನ ಸಭೆಗೆ ವರದಿ ನೀಡುವುದು.
- ಶ್ರೀ.ಆರ್.ಪಿ.ಶೆಟ್ಟಿ ಸಾರ್ವಜನಿಕರು ರವರು ಮಾತನಾಡುತ್ತಾ, ಇಂದಿರಾನಗರ 2ನೇ ಹಂತದಲ್ಲಿರುವ ಎ.ಬಿ.ಸಿ.ಡಿ ಪಾರ್ಕ್‌ನಲ್ಲಿ ವಿದ್ಯುತ್ ದೀಪಗಳು ಇರುವುದಿಲ್ಲ, ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಿಕೊಡಲು ಕೋರಿರುತ್ತಾರೆ.

- ಶ್ರೀ.ಕುಲಕರ್ಣಿ, ಸಾರ್ವಜನಿಕರು ರವರು ಮಾತನಾಡುತ್ತಾ, 17ನೇ ಡಿ ಮುಖ್ಯರಸ್ತೆ, ಇಂದಿರಾನಗರ 2ನೇ ಹಂತದಲ್ಲಿ ರಸ್ತೆಗೆ ಸುಮಾರು 4 ವರ್ಷಗಳಿಂದ ಡಾಂಬರೀಕರಣ ಮಾಡಿರುವುದಿಲ್ಲ ಎಂದು ಹಾಗೂ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸುತ್ತೇವೆ ಎಂದು ಹೇಳಿಕೆಯನ್ನು ನೀಡಿ, ಈವರೆವಿಗೂ ಸದರಿ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ ಎಂದು ದೂರಿರುತ್ತಾರೆ.
- ಶ್ರೀ.ನಾಯ್ಡು ರವರು ಹೆಚ್.ಎ.ಎಲ್ 2ನೇ ಹಂತದ ರೆಸಿಡೆನ್ಸಿ ಅಸೋಸಿಯೇಷನ್ ರವರು ಮಾತನಾಡಿ, 6ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, 12ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಂ:541, ಹೆಚ್.ಎ.ಎಲ್ 2ನೇ ಹಂತದ ಪಾದಚಾರಿ ರಸ್ತೆಯಲ್ಲಿ ಡೆಬ್ರೀಸ್ (ಕಲ್ಲು ಮಣ್ಣನ್ನು) ಹಾಕಿರುತ್ತಾರೆ, ಅದನ್ನು ತೆರವುಗೊಳಿಸಲು ಕೋರಿದರು. ಸದರಿ ರಸ್ತೆಯ ಪಾದಚಾರಿ ರಸ್ತೆಯ ಮೇಲೆ ಹಾಕಿರುವ ಡೆಬ್ರೀಸ್ (ಕಲ್ಲು ಮಣ್ಣು)ನ್ನು ತೆರವುಗೊಳಿಸಲು ಸಹಾಯಕ ಅಭಿಯಂತರರು ಕ್ರಮ ವಹಿಸಿ ಮುಂದಿನ ಸಭೆಗೆ ವರದಿ ನೀಡುವುದು.
- 17ನೇ ಬಿ ಮುಖ್ಯರಸ್ತೆ, ಸಿ ಮುಖ್ಯರಸ್ತೆ, 14ನೇ ಅಡ್ಡರಸ್ತೆಗಳಲ್ಲಿ ಡೆಬ್ರೀಸ್ (ಕಲ್ಲು ಮಣ್ಣು) ತುಂಬಿಕೊಂಡಿದ್ದು, ಸದರಿ ರಸ್ತೆಯಲ್ಲಿ ತುಂಬಿರುವ ಡೆಬ್ರೀಸ್ (ಕಲ್ಲು ಮಣ್ಣು) ನ್ನು ತೆರವುಗೊಳಿಸಲು ಕೋರಿರುತ್ತಾರೆ. ಸದರಿ ರಸ್ತೆಯ ಪಾದಚಾರಿ ರಸ್ತೆಯ ಮೇಲೆ ಹಾಕಿರುವ ಡೆಬ್ರೀಸ್ (ಕಲ್ಲು ಮಣ್ಣು)ನ್ನು ತೆರವುಗೊಳಿಸಲು ಸಹಾಯಕ ಅಭಿಯಂತರರು ಕ್ರಮ ವಹಿಸಿ ಮುಂದಿನ ಸಭೆಗೆ ವರದಿ ನೀಡುವುದು.
- 10ನೇ ಮುಖ್ಯರಸ್ತೆ, 17ನೇ ಸಿ ಮುಖ್ಯರಸ್ತೆ, ಇಂದಿರಾನಗರ 2ನೇ ಹಂತದಲ್ಲಿ ವಿದ್ಯುತ್ ದೀಪಗಳು ಇರುವುದಿಲ್ಲ, ಇದರಿಂದ ರಾತ್ರಿ ವೇಳೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ.
- ಶ್ರೀ.ಕುಮಾರ್, ಸದಸ್ಯರು ರವರು ಮಾತನಾಡುತ್ತಾ, ಮರ್ಫಿಟೌನ್‌ನಲ್ಲಿರುವ ಆಟದ ಮೈದಾನದಲ್ಲಿರುವ ಕಸ, ಮಣ್ಣು ಹಾಗೂ ಇತ್ಯಾದಿ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಸದರಿ ಆಟದ ಮೈದಾನದಲ್ಲಿ ಬಿದ್ದಿರುವ ಕಸ, ಮಣ್ಣು ಹಾಗೂ ಇತ್ಯಾದಿ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಲು ಸಹಾಯಕ ಅಭಿಯಂತರರು ಕ್ರಮ ವಹಿಸಿ ಮುಂದಿನ ಸಭೆಗೆ ವರದಿ ನೀಡುವುದು.
- ಶ್ರೀ.ವೆಂಕಟೇಶ್, ಸಾರ್ವಜನಿಕರು ರವರು ಮಾತನಾಡುತ್ತಾ, ಆದರ್ಶ ಥೀಯೇಟರ್ ಹತ್ತಿರ ರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲುಗಡೆ ಮಾಡಿರುತ್ತಾರೆ, ಇದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುತ್ತದೆ ಎಂದು ದೂರಿರುತ್ತಾರೆ.

ಮೇಲ್ಕಂಡಂತೆ ತಿಳಿಸಲಾಗಿರುವ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕ್ರಮವಹಿಸಲು ಹಾಗೂ ಸಮಿತಿಯ ಸದಸ್ಯರು ಕೋರಿರುವ ವಿವರಗಳನ್ನು ಮುಂದಿನ ವಾರ್ಡ್ ಸಮಿತಿಯ ಸಭೆಗೆ ಒದಗಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

4/9/2021

| | |
|---|---|
| ಕಾರ್ಯದರ್ಶಿಗಳು<br>ವಾರ್ಡ್ ಸಮಿತಿ-80 | ಅಧ್ಯಕ್ಷರು<br>ವಾರ್ಡ್ ಸಮಿತಿ ಹಾಗೂ<br>ನೋಡಲ್ ಅಧಿಕಾರಿಗಳು,<br>ವಾರ್ಡ್ 80 |